# ಪೆಟ್ಟಿಗೆಯಲ್ಲಿ ರಾಜಕುಮಾರಿ



ಭಾಗ–1

ಒಬ್ಬ ರಾಜನಿಗೆ ತನ್ನ ಒಬ್ಬಳೇ ರಾಜಕುಮಾರಿಯನ್ನು ವಿದ್ಯಾವಂತಳನ್ನಾಗಿ ಮಾಡಬೇಕೆಂಬ ಆಸೆ. ರಾಜಕುಮಾರಿಗೆ ವಿದ್ಯೆ ಹೇಳಿಕೊಡಲು ಗುರುವೊಬ್ಬರನ್ನು ನೇಮಿಸಲಾಯಿತು. ಪ್ರತಿ ನಿತ್ಯ ಗುರು ರಾಜನ ಅರಮನೆಗೆ ಬಂದು ರಾಜಕುಮಾರಿಗೆ ವಿದ್ಯೆ ಹೇಳಿ ಕೊಡುತ್ತಿದ್ದರು. ಕುಮಾರಿಯಾಗಿದ್ದ ರಾಜಕುಮಾರಿ ಬೆಳೆದು ಯುವತಿಯಾದಳು. ಸಹಜ ರೂಪದ ಜೊತೆ ವಿದ್ಯೆಯೂ ಸೇರಿ ಅತ್ಯಂತ ಆಕರ್ಷಕ ಹೆಣ್ಣಾದಳು.

ಆ ರಾಜನಿಗೊಬ್ಬ ಮಂತ್ರಿ. ಮಂತ್ರಿಗೊಬ್ಬ ಮಗ. ಮಂತ್ರಿಕುಮಾರನಿಗೆ ರಾಜಕುಮಾರಿಯ ಮೇಲೆ ಕಣ್ಣು. ವಯಸ್ಸಿಗೆ ಬಂದಿದ್ದ ಮಂತ್ರಿಯ ಮಗನ ದೃಷ್ಟಿ ಸಹಜವಾಗಿ ರಾಜಕುಮಾರಿಯತ್ತ ಹೊರಳಿತು. ತಂದೆಯಲ್ಲಿ ತನ್ನ ಇಚ್ಛೆಯನ್ನು ಹೇಳಿಕೊಂಡ. ಮಂತ್ರಿಗೂ ಮಗನ ಆಲೋಚನೆ ಸರಿ ಎನಿಸಿತು. ರಾಜಕುಮಾರಿ ಸೊಸೆಯಾಗಿಬಿಟ್ಟರೆ, ರಾಜ್ಯವೇ ತನ್ನ ಮಗನದಾಗುತ್ತದೆ. ರಾಜನ ಕಾಲಾನಂತರ ನನ್ನ ಮಗನೇ ಈ ರಾಜ್ಯದ ರಾಜನಾಗುತ್ತಾನೆಂದು ಮಂತ್ರಿ ಲೆಕ್ಕ ಹಾಕಿದ. ರಾಜನೊಂದಿಗೆ ಪ್ರಸ್ತಾಪ ಮಾಡಲು ಸಮಯ ಕಾಯುತ್ತಿದ್ದ.

ಮಂತ್ರಿಯ ಮಗನ ಕಾಕದೃಷ್ಟಿ ತನ್ನ ಮೇಲಿದೆ ಎಂದು ರಾಜಕುಮಾರಿಗೆ ಅರ್ಥವಾಯಿತು. ಅವನ ಕೆಟ್ಟ ಯೋಚನೆ ಆಕೆಗೆ ಇಷ್ಟವಾಗಲಿಲ್ಲ. ಆದರೆ ಮಂತ್ರಿಯ ಮಗ ಅವಕಾಶ ಸಿಕ್ಕಾಗಲೆಲ್ಲ ರಾಜಕುಮಾರಿಯನ್ನು ಆಕರ್ಷಿಸಲು ಪ್ರಯತ್ನಿಸುತ್ತಿದ್ದ. ಅರಮನೆಗೆ ರಾಜಕುಮಾರಿಗೆ ಪಾಠ ಹೇಳಿ ಕೊಡಲು ಗುರುಗಳು ಬರುವ ವಿಚಾರ ಕೂಡ ಅವನಿಗೆ ತಿಳಿದಿತ್ತು.

ಗುರುವಿನಲ್ಲಿ ಕಲಿಯುತ್ತಿದ್ದ ರಾಜಕುಮಾರಿಗೆ ಹದಿನೆಂಟು ವರ್ಷ ತುಂಬಿತು. 'ವಿದ್ಯೆಯೆಲ್ಲ ಪೂರ್ಣವಾಯಿತು, ಇನ್ನು ನೀನು ಮದುವೆಯಾಗಿ ಸದ್ಗೃಹಿಣಿಯಾಗಬಹುದು' ಎಂದು ಗುರು ರಾಜಕುಮಾರಿಗೆ ಹೇಳಿದರು. 'ಗುರುಗಳೇ ನಾನು ನಿಮಗೆ ಗುರುದಕ್ಷಿಣೆ ಕೊಡಬೇಕು' ಎಂದಳು ರಾಜಕುಮಾರಿ.

'ಗುರುದಕ್ಷಿಣೆಯ ಅವಶ್ಯಕತೆಯಿಲ್ಲ. ಎಲ್ಲ ವಿದ್ಯೆಗಳನ್ನೂ ಶ್ರದ್ಧೆಯಿಂದ ಕಲಿತಿದ್ದೀಯೆ. ಮುಂದೆ ಸತ್ಯ–ಧರ್ಮ ಮಾರ್ಗದಲ್ಲಿ ನೀನು ನಡೆವಂತಾದರೆ ಅದೇ ನನಗೆ ಸಲ್ಲುವ ಗುರುದಕ್ಷಿಣೆ' ಎಂದರು ಗುರುಗಳು.

'ಇಲ್ಲ ಗುರುಗಳೇ, ಗುರುದಕ್ಷಿಣೆಯನ್ನು ತಾವು ಪಡೆಯಲೇಬೇಕು' ಎಂದು ರಾಜಕುಮಾರಿ ಆಗ್ರಹಪಡಿಸಿದಳು. 'ಬರುವ ಹುಣ್ಣಿಮೆಯಂದು ನಿಮ್ಮ ಮನೆಗೇ ಬಂದು ಗುರುದಕ್ಷಿಣೆಯನ್ನು ಕೊಡುತ್ತೇನೆ' ಎಂದು ಒತ್ತಾಯ ಮಾಡುತ್ತ ರಾಜಕುಮಾರಿ ಹೇಳಿದಳು.

ಈ ಎಲ್ಲ ಸಂಭಾಷಣೆಗಳನ್ನೂ ಮಂತ್ರಿಯ ಮಗ ಕದ್ದು ಆಲಿಸುತ್ತಿದ್ದ. ತನ್ನ ತಂದೆಯೊಡನೆ ಒಂದು ಯೋಜನೆ ರೂಪಿಸಿದ. ಮಂತ್ರಿ ಕೂಡ ಹಾಗೇ ಆಗಲೆಂದ.

ನಿರೀಕ್ಷಿಸಿದಂತೆ ರಾಜಕುಮಾರಿ ಹುಣ್ಣಿಮೆಯಂದು ಗುರುದಕ್ಷಿಣೆ ಕೊಡಲು ಗುರುವಿನ ಮನೆಗೆ ಬಂದಳು. ಮಂತ್ರಿಯ ಮಗ ಕೂಡ ಅವಕಾಶಕ್ಕಾಗಿ ಕಾಯುತ್ತಿದ್ದ.

ರಾಜಕುಮಾರಿ ಗುರುವಿನ ಕಾಲುಗಳನ್ನು ಸ್ಪರ್ಶಿಸುತ್ತ ನಮಸ್ಕರಿಸಿದಳು. ಮಂತ್ರಿಯ ಮಗ ಕಾಣಿಸಿಕೊಂಡು ಹೇಳಿದ, 'ಗುರುಗಳೇ, ರಾಜಕುಮಾರಿಯ ಗುರುದಕ್ಷಿಣೆಯಾಗಿ ನನ್ನನ್ನು ಸ್ವೀಕರಿಸಲು ಹೇಳಿ. ನಾನು ಆಕೆಯನ್ನು ವರಿಸಲು ಇಚ್ಛಿಸುತ್ತೇನೆ. ಈ ಮದುವೆ ಆಗಲೇಬೇಕು'.

ಮಂತ್ರಿಮಗನ ವರ್ತನೆಯಿಂದ ಗುರು ಮತ್ತು ರಾಜಕುಮಾರಿ ತಬ್ಬಿಬ್ಬಾದರು. ಆತನ ಯೋಜನೆಯನ್ನು ಧಿಕ್ಕರಿಸಿದರು. ಮೊದಲೇ ಎಲ್ಲವನ್ನೂ ಸಿದ್ಧ ಮಾಡಿಕೊಂಡಿದ್ದ ಮಂತ್ರಿಯ ಮಗ ಇಬ್ಬರನ್ನೂ ಬಂಧಿಸಿದ. ಹಗ್ಗದಿಂದ ಕೈಕಾಲು ಕಟ್ಟಿದ. ರಾಜಕುಮಾರಿಯನ್ನು ಒಂದು ಮರದ ಪೆಟ್ಟಿಗೆಯಲ್ಲಿ ಇರಿಸಿದ. ಗುರುವನ್ನು ಮನೆಯ ಹಿಂದಿನ ಕತ್ತಲೆಯ ಕೋಣೆಯಲ್ಲಿ ಕೂಡಿದ. ಬಂದಿದ್ದ ಸಹಾಯಕರಿಗೆ ಒಂದಿಷ್ಟು ಹಣ ಕೊಟ್ಟು ಕಿವಿಯಲ್ಲೇನೊ ಹೇಳಿ ಕಳಿಸಿದ. ಮಾಂತ್ರಿಕನಂತೆ ವೇಷ ಮರೆಸಿಕೊಂಡ ಮಂತ್ರಿಯ ಮಗ. ರಾಜಕುಮಾರಿ ಇದ್ದ ಪೆಟ್ಟಿಗೆಯನ್ನು ಹೊತ್ತು ಕಾಡಿನತ್ತ ನಡೆದ. ಆಗಲೇ ಸಂಜೆಯಾಗಿ, ಸೂರ್ಯ ಪಶ್ಚಿಮದಲ್ಲಿ ಮುಳುಗುತ್ತಿದ್ದ.

ತನ್ನ ತಂತ್ರ ಫಲಿಸಿತೆಂದು ಮಂತ್ರಿಯ ಮಗ ಉಬ್ಬಿದ. ತಲೆಯ ಮೇಲೆ ಪೆಟ್ಟಿಗೆಯನ್ನು ಹೊತ್ತು ಬಹಳ ದೂರ ನಡೆದ. ಕಾಡನ್ನು ದಾಟಿ ಒಂದು ಹಳ್ಳಿಗೆ ಬಂದ. ಆಯಾಸವಾಗಿತ್ತು. ದೂರದಲ್ಲೊಂದು ಒಂಟಿ ಮನೆಯ ದೀಪ ಕಾಣಿಸಿತು. ಅಲ್ಲಿಗೆ ಹೋಗಿ ಬಾಗಿಲನ್ನು ತಟ್ಟಿದ. ಯುವಕನೊಬ್ಬ ಬಾಗಿಲು ತೆರೆದ.

ತಾನೊಬ್ಬ ಮಾಂತ್ರಿಕನೆಂದೂ, ಪೆಟ್ಟಿಗೆಯಲ್ಲಿ ಭೂತವಿರುವುದೆಂದೂ ಸುಳ್ಳು ಕತೆ ಕಟ್ಟಿ ಹೇಳಿದ. 'ಈ ಭೂತವನ್ನು ಕಾಶಿಯಲ್ಲಿ ಬಿಡಬೇಕಿದೆ, ಯಾವ ಕಾರಣಕ್ಕಾಗಿಯೂ ಪೆಟ್ಟಿಗೆಯನ್ನು ತೆರೆಯಬಾರದು, ಬಾಗಿಲು ತೆರೆದವರನ್ನು ಭೂತ ರಕ್ತಕಾರಿ ತಿಂದು ಹಾಕುತ್ತದೆ' ಎಂದು ಎಚ್ಚರಿಸಿದ.

ಮನೆಯ ಹಿಂದಿನ ಕೋಣೆಯಲ್ಲಿ ಮಂತ್ರಿಕುಮಾರ ತಂದಿದ್ದ ಪೆಟ್ಟಿಗೆಯನ್ನು ಇರಿಸಲಾಯಿತು. ಕೋಣೆಗೊಂದು ಬೀಗವನ್ನೂ ಹಾಕಲಾಯಿತು. ಮಂತ್ರಿಯ ಮಗ ಯುವಕನ ಮನೆಯಲ್ಲಿ ಅಂದು ರಾತ್ರಿ ತಂಗಿದ. 'ಬೆಳಗಾದೊಡನೆಯೇ ಪೆಟ್ಟಿಗೆಯನ್ನು ಒಯ್ಯುತ್ತೇನೆ. ಕಾಡಿನ ಮಧ್ಯದಲ್ಲಿ ರಾಜಕುಮಾರಿಯನ್ನು ಮದುವೆಯಾಗುತ್ತೇನೆ' ಎಂದು ಯೋಚಿಸಿದ. ಮದುವೆಯಾಗಲು ಸಿದ್ಧನಾಗಿಯೇ ಆತ ಬಂದಿದ್ದ. ಮಾಂಗಲ್ಯವನ್ನು ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ. ಅರಿಶಿಣ–ಕುಂಕುಮ, ಹೂ– ಹಣ್ಣು ಎಲ್ಲವನ್ನೂ ಒಂದು ಚೀಲದಲ್ಲಿ ತಂದಿದ್ದ. ಪೆಟ್ಟಿಗೆಯಲ್ಲಿ ಭೂತವಿರುವುದಾಗಿ ಯುವಕನನ್ನು ನಂಬಿಸಿದ್ದಕ್ಕೆ ಅವನಿಗೆ ಕೆಟ್ಟ ಖುಷಿಯಾಗಿತ್ತು.

(ಮುಂದುವರಿಯುವುದು)

**- ಮತ್ತೂರು ಸುಬ್ಬಣ್ಣ**